# ✻ ವೈಖಾನಸ ಆಗಮ ✻

ಆಂಗ್ಲಮೂಲ: ಸ್ವಾಮಿ ಹರ್ಷಾನಂದ     ಅನುವಾದ: ಡಾ.ಎಚ್.ರಾಮಚಂದ್ರಸ್ವಾಮಿ

ಶ್ರೀವೈಷ್ಣವ ಸಂಪ್ರದಾಯದ ಅರ್ಚನಾ ಪದ್ಧತಿಯನ್ನು ಈ ಲೇಖನದ ಮೂಲಕ ಪರಿಚಯಿಸಿರುವ ಪೂಜ್ಯರು ಬೆಂಗಳೂರಿನಲ್ಲಿರುವ ರಾಮಕೃಷ್ಣ ಮಠದ ಅಧ್ಯಕ್ಷರು. ಹಿಂದೂಧರ್ಮದ ಶಾಸ್ತ್ರಗಳಲ್ಲಿ, ಆಚರಣೆಗಳಲ್ಲಿ ಅಗಾಧ ಪಾಂಡಿತ್ಯವುಳ್ಳ ಸ್ವಾಮಿಜಿಯವರು ಹಿಂದೂಧರ್ಮದ ವಿಶ್ವಕೋಶವನ್ನು ತಯಾರಿಸುವಲ್ಲಿ ನಿರತರಾಗಿದ್ದಾರೆ.

**ಆ**ಗಮಗಳೆಂದರೆ ಹಿಂದೂಧರ್ಮದಲ್ಲಿನ ಕರ್ಮಾನುಷ್ಠಾನ ಹಾಗೂ ದೇವಾಲಯ ಸಂಸ್ಕೃತಿಯನ್ನು ಕುರಿತಾದ ಆನುಷಂಗಿಕ ಶಾಸ್ತ್ರಗ್ರಂಥಗಳು. ಶೈವಾಗಮ, ಶಾಕ್ತಾಗಮ ಮತ್ತು ವೈಷ್ಣವಾಗಮಗಳೆಂಬ ಮೂರು ಮುಖ್ಯವಾದ ಆಗಮಗಳಲ್ಲಿ ಕೊನೆಯದಾದ ವೈಷ್ಣವಾಗಮವು ಪಾಂಚರಾತ್ರ ಮತ್ತು ವೈಖಾನಸ ಎಂಬ ಎರಡು ಸಂಪ್ರದಾಯಗಳಾಗಿ ಒಡೆದಿದೆ. ವೈಖಾನಸ ಋಷಿಯಿಂದ ಸ್ಥಾಪಿತವಾದ್ದರಿಂದ ಎರಡನೆಯದಕ್ಕೆ ಆ ಹೆಸರು.

ತುಂಬ ಪ್ರಾಚೀನನಾದ ವೈಖಾನಸ ಋಷಿಯು ವಿಷ್ಣುವಿನ ಅವತಾರ (ಅಥವಾ ಅವನಿಂದ ಉದ್ಭವನಾದ ವೇದಪುರುಷ) ಎಂದು ಪರಿಗಣಿಸಲ್ಪಟ್ಟವನು; ದೇಶದಲ್ಲಿ ವೈಷ್ಣವ ಮತವನ್ನು ಜನಪ್ರಿಯಗೊಳಿಸಿದವನು. ಆತನನ್ನು ಚತುರ್ಮುಖ ಬ್ರಹ್ಮನಲ್ಲದೆ ಬೇರೆಯಲ್ಲ ಎನ್ನುವುದೂ ಉಂಟು. ಆತನು *ವೈಖಾನಸ ಕಲ್ಪಸೂತ್ರಗಳು* ಮತ್ತು *ದೈವಿಕಸೂತ್ರಗಳು* ಎಂಬೆರಡು ಪ್ರಕರಣಗ್ರಂಥಗಳ ಕರ್ತೃ ಎನ್ನುವರು. ಆತನಿಗೆ ಮರೀಚಿ, ಅತ್ರಿ, ಭೃಗು ಮತ್ತು ಕಶ್ಯಪ ಎಂಬ ನಾಲ್ವರು ಮುಖ್ಯ ಶಿಷ್ಯರು. ವೈಖಾನಸನು ಇವರಿಗೆ ವಿಷ್ಣುವಿನ ಆರಾಧನೆಯನ್ನು ವಿವರವಾಗಿ ಬೋಧಿಸಿದನು. ಮೂರ್ತಿಶಿಲ್ಪ ಶಾಸ್ತ್ರದ ಪ್ರಕಾರ ಈತನು ಗೌರವರ್ಣದವನು, ನಾಲ್ಕು ಕೈಗಳಿರುವವನು, ಹೊಂಬಣ್ಣದ ವಸ್ತ್ರಗಳನ್ನು ಧರಿಸಿರುವವನು; ಕೈಯಲ್ಲಿ ದಂಡವನ್ನು ಹಿಡಿದು, ಹುಲ್ಲೆಯೊಂದರ ಮೇಲೆ ಸವಾರಿ ಮಾಡುವವನು. ಸಾಮಾನ್ಯವಾಗಿ ನಾಲ್ಕು ಜನ ಶಿಷ್ಯರೊಂದಿಗೆ ಈತನನ್ನು ತೋರಿಸುವರು. ವಿಷ್ಣು ದೇವಾಲಯಗಳಲ್ಲಿ ಈತನ ಪ್ರತಿಮೆಯನ್ನು ಮುಖಮಂಟಪದ ಪ್ರವೇಶದ ಬಲಗಡೆ ಸ್ಥಾಪಿಸುವರು.

**ವೈಖಾನಸ ಸಾಹಿತ್ಯ**

ವೈಖಾನಸ ಋಷಿಯ ಮುಖ್ಯವಾದ ಮೂಲಕೃತಿ *ವೈಖಾನಸ ಕಲ್ಪಸೂತ್ರಗಳು* ಈಗ ಲಭ್ಯವಿಲ್ಲ. ಆತನ ನಾಲ್ಕು ಮಂದಿ ಶಿಷ್ಯರು ರಚಿಸಿರುವ ಕೃತಿಗಳು ಹೀಗಿವೆ:

೧. ಅತ್ರಿಯಿಂದ ರಚಿತವಾದುವು (ಒಟ್ಟು ೮೮,೦೦೦ ಶ್ಲೋಕಗಳು): ಆತ್ರೇಯತಂತ್ರ;, ಪೂರ್ವತಂತ್ರ; ಉತ್ತರತಂತ್ರ;, ಮತ್ತು ವಿಷ್ಣುತಂತ್ರ.

೨. ಭೃಗುವಿನಿಂದ ರಚಿತವಾದುವು (ಒಟ್ಟು ೬೪,೦೦೦ ಶ್ಲೋಕಗಳು): ಅರ್ಚಾಧಿಕಾರ, ಚಿತ್ರಾಧಿಕಾರ, ಖಿಲಾಧಿಕಾರ, ಖಿಲತಂತ್ರ, ಕ್ರಿಯಾಧಿಕಾರ, ಮಾನಾಧಿಕಾರ, ನಿರುಕ್ತಾಧಿಕಾರ, ಪ್ರಕೀರ್ಣಾಧಿಕಾರ, ಪ್ರತಿಗೃಹ್ಯಾಧಿಕಾರ, ಪುರಾತಂತ್ರ; ವರುಣಾಧಿಕಾರ, ವಾಸಾಧಿಕಾರ ಮತ್ತು ಯಜ್ಞಾಧಿಕಾರ.

೩. ಕಶ್ಯಪನಿಂದ ರಚಿತವಾದುವು (ಒಟ್ಟು ೬೪,೦೦೦ ಶ್ಲೋಕಗಳು): ಜ್ಞಾನಕಾಂಡ, ಸತ್ಯಕಾಂಡ ಮತ್ತು ತರ್ಕಕಾಂಡ.

೪. ಮರೀಚಿಯಿಂದ ರಚಿತವಾದುವು (ಒಟ್ಟು ೧,೮೪,೦೦೦ ಶ್ಲೋಕಗಳು): ಆನಂದಸಂಹಿತಾ, ಜಯಸಂಹಿತಾ, ಸಂಜ್ಞಾನಸಂಹಿತಾ;, ವಿಜಯಸಂಹಿತಾ, ವಿಜಿತಸಂಹಿತಾ, ವಿಮಲಸಂಹಿತಾ ಹಾಗೂ ವೀರಸಂಹಿತಾ.

ಇವುಗಳಲ್ಲಿ ಈ ಹೊತ್ತಿಗೂ ಉಳಿದುಕೊಂಡು ಬಂದಿರುವುವು ಕೆಲವೇ ಕೆಲವು. ಅವು ಯಾವುವೆಂದರೆ, ಮರೀಚಿಯ ಆನಂದಸಂಹಿತಾ ಮತ್ತು ಜಯಸಂಹಿತಾ, ಭೃಗುವಿನ ಖಿಲಾಧಿಕಾರ, ಕ್ರಿಯಾಧಿಕಾರ, ಪ್ರಕೀರ್ಣಾಧಿಕಾರ ಮತ್ತು ಯಜ್ಞಾಧಿಕಾರ; ಕಶ್ಯಪನ ಜ್ಞಾನಕಾಂಡ ಹಾಗೂ ಅತ್ರಿಯ ಉತ್ತರತಂತ್ರ (ಅಥವಾ ಸಮೂರ್ತಾರ್ಚನಾಧಿಕಾರ).

ವೈಖಾನಸ ಸಾಹಿತ್ಯದ ಇನ್ನು ಕೆಲವು ಮುಖ್ಯ ಕೃತಿಗಳೆಂದರೆ: ಶ್ರೀನಿವಾಸ ಮಖಿಯ (ಕ್ರಿ. ಶ. ೧೦೫೦) ರಚನೆಗಳಾದ ದಶವಿಧಹೇತುನಿರೂಪಣ, ಬಾದರಾಯಣರ ವೇದಾಂತ ಸೂತ್ರಗಳ ಮೇಲಣ ಲಕ್ಷ್ಮೀವಿಶಿಷ್ಟಾದ್ವೈತಭಾಷ್ಯ, ಉತ್ತಮಬ್ರಹ್ಮವಿದ್ಯಾ ಮತ್ತು ವೈಖಾನಸ ಮಹಿಮಮಂಜರೀ; ನೃಸಿಂಹ ವಾಜಪೇಯ ಯಾಜಿಯ ರಚನೆಗಳಾದ ವೈಖಾನಸ ಕಲ್ಪಸೂತ್ರಗಳ ಮೇಲಣ ಭಾಷ್ಯ ಮತ್ತು ಸಕಲಾಗಮಸಾರ ಸಂಗ್ರಹ; ಕೇಶವಾಚಾರ್ಯನ ಅರ್ಚನಾನವನೀತ; ಸುಂದರ ರಾಜನ (ವೈಖಾನಸ ಸೂತ್ರಗಳ ಮೇಲಣ) ಪ್ರಯೋಗವೃತ್ತಿ, ರಘುನಾಥ ಚಕ್ರವರ್ತಿ ಮತ್ತು ಸೇತುಮಾಧವಾಚಾರ್ಯರ ವಿಮಾನಾರ್ಚನಕಲ್ಪ.

ವೈಖಾನಸ ಆಗಮಶ್ರೇಣಿಯ ಗ್ರಂಥಗಳೆಲ್ಲವೂ ದೇವಾಲಯದಲ್ಲಿ ನಡೆಸಬೇಕಾದ ಕ್ರಿಯಾಕರ್ಮಗಳು ಹಾಗೂ ವಿಗ್ರಹಾರಾಧನೆಗಳನ್ನು ವಿವರಿಸುವುದರಲ್ಲಿ ವಿಶಿಷ್ಟವಾದುವು.

ದೇವಾಲಯ ಶಿಲ್ಪ ಶಾಸ್ತ್ರದ ಮೂಲಭೂತ ಅಂಶಗಳನ್ನೂ ಸಹ ಅವು ವಿವರಿಸುತ್ತವೆ.

**ವೈಖಾನಸ ಸಿದ್ಧಾಂತ**

ಶ್ರೀನಿವಾಸ ಮಖಿಯ ಬಾದರಾಯಣ ವೇದಾಂತ ಸೂತ್ರಗಳ ಮೇಲಣ ಭಾಷ್ಯವನ್ನಾಧರಿಸಿ ರಘುಪತಿ ಭಟ್ಟಾಚಾರ್ಯ (ಇವನಿಗೆ ವಾಸುದೇವ ಎಂದೂ ಹೆಸರು) ಎಂಬಾತನು ಮೋಕ್ಷೋಪಾಯಪ್ರದೀಪಿಕಾ ಎಂಬ ಕೃತಿಯೊಂದನ್ನು ರಚಿಸಿರುವನು. ಇದರಲ್ಲಿ ವೈಖಾನಸ ಆಗಮಗಳ ತತ್ತ್ವಸಿದ್ಧಾಂತವನ್ನು ವಿಧ್ಯುಕ್ತವಾಗಿ ಪ್ರಸ್ತುತಪಡಿಸಿರುವನು; ಶ್ರೀರಾಮಾನುಜರ (ಕ್ರಿ. ಶ. ೧೦೧೭–೧೧೩೭) ವಿಶಿಷ್ಟಾದ್ವೈತವನ್ನೇ ಹೋಲುವ ಇದು ಹನ್ನೆರಡು ವಿಭಾಗಗಳಿಂದ ಕೂಡಿದ ಗದ್ಯ ಕೃತಿಯಾಗಿದೆ.

ಬ್ರಹ್ಮ ಅಥವಾ ಪರಮಾತ್ಮ ಎಂಬುದೇ ಅತ್ಯುನ್ನತ ಹಾಗೂ ಸ್ವತಂತ್ರ ಸತ್ಯ. ಇದರಲ್ಲಿ ನಿಷ್ಕಲಾ (ರೂಪಗುಣವಿವರ್ಜಿತ) ಮತ್ತು ಸಕಲಾ (ರೂಪ ಗುಣಗಳಿಂದ ಕೂಡಿದ್ದು) ಎಂಬ ಎರಡು ಲಕ್ಷಣಗಳಿವೆ. ಸಕಲಾ ಬ್ರಹ್ಮನಿಗೆ ವಿಷ್ಣು ಅಥವಾ ನಾರಾಯಣನೆಂದೂ ಹೆಸರು. ಅವನು ಚಂದ್ರನು ಬೆಳದಿಂಗಳೊಂದಿಗೆ ಹೇಗೋ ಹಾಗೆ, ಪ್ರತ್ಯೇಕಿಸಲಾಗದಂತೆ ಲಕ್ಷ್ಮಿಯೊಂದಿಗಿರುವವನು. ಅವನೇ ಈಶ್ವರ; ಚಿರಂತನವಾದ (ಸತ್ತ್ವ ರಜಸ್ ತಮೋಗುಣಗಳಿಂದ ಕೂಡಿದ) ಅಪ್ರಜ್ಞಾಪ್ರಕೃತಿ ಮತ್ತು (ಜೀವಾತ್ಮರುಗಳಾದ) ಪ್ರಜ್ಞಾಪುರುಷ ಇವೆರಡೂ ಅವನ ಅಧೀನದಲ್ಲಿರುವ ವಾಸ್ತವಗಳು. ಪರಮಾಣುಗಾತ್ರದ ಈ ಜೀವರುಗಳಲ್ಲಿ (ಸನಕಾದಿಗಳಂತೆ, ಅನಂತ ಅಥವಾ ಆದಿಶೇಷನಂತೆ, ಪರಿವರ್ತನೆಯಾಗದ) ನಿತ್ಯ, (ಹಿಂದೊಮ್ಮೆ ಬಂಧನದಲ್ಲಿದ್ದು ಈಗ) ಮುಕ್ತ ಮತ್ತು (ತಮ್ಮ ಪ್ರಾರಬ್ಧಕರ್ಮಗಳಿಂದಾಗಿ ಬಂಧಿತ ಅಥವಾ) ಬದ್ಧ ಎಂದು ಮೂರು ಬಗೆ. ಬದ್ಧ ಜೀವರುಗಳು ಈಶ್ವರನ (ಅಥವಾ ವಿಷ್ಣುವಿನ) ಮಾಯೆಯಿಂದ ಕಟ್ಟಿಹಾಕಲ್ಪಟ್ಟಿದ್ದು, ಆತನಲ್ಲಿ ಭಕ್ತಿಯಿಂದ ಶರಣಾಗತರಾಗಿ ಆತನಲ್ಲೇ ಆಶ್ರಿತರಾಗುವ ಮೂಲಕ ಮುಕ್ತಿಯನ್ನು ಪಡೆಯಬಹುದು. ಜ್ಞಾನ, ಉಪಾಸನಾ, ಪ್ರಪತ್ತಿ ಅಥವಾ ಶರಣಾಗತಿ ಮತ್ತು ಕರ್ಮಾನುಷ್ಠಾನ—ಇವು ಮುಕ್ತಿ ಸಾಧಕಗಳು. ಆದರೂ, ಸಮಾರಾಧನ (ತೀವ್ರ ಭಕ್ತಿಯಿಂದ ನಾರಾಯಣನನ್ನು ಆರಾಧಿಸುವುದು) ಅತ್ಯಂತ ಪರಿಣಾಮಕಾರಿ ಸಾಧನೆ ಎನ್ನುವರು. ಇದು ಜಪ (ಭಗವನ್ನಾಮ ಪುರಶ್ಚರಣ), ಹುತ (ಬೆಂಕಿಯಲ್ಲಿ ಹೋಮ ಮಾಡುವುದು), ಅರ್ಚನಾ (ಪ್ರತಿಮೆಯ ಪೂಜೆ) ಮತ್ತು ಧ್ಯಾನ ಎಂಬ ನಾಲ್ಕು ರೂಪಗಳನ್ನು ತಳೆಯಬಹುದು. ಹುತ ಎನ್ನುವುದು ದೇವರ ಅಮೃತ (ಪ್ರತಿಮೆಯಲ್ಲದ) ರೂಪದ ಪೂಜೆ; ಆದರೆ ಪ್ರತಿಮೆಯ ಅರ್ಚನೆಯನ್ನೇ ಎಲ್ಲಕ್ಕಿಂತ ಪರಿಣಾಮಕಾರಿ ಎಂದು ಉದ್ಘೋಷಿಸಿರುವರು. ಮುಕ್ತಿಯು ಸಾಲೋಕ್ಯ (ಭಗವಂತನ ಲೋಕದಲ್ಲಿ ವಾಸಿಸುವುದು), ಸಾಮೀಪ್ಯ (ಭಗವಂತನ ಸಮೀಪದಲ್ಲಿ ವಾಸಿಸುವುದು), ಸಾರೂಪ್ಯ (ಭಗವಂತನ ಹಾಗೆಯೇ ರೂಪ ತಳೆಯುವುದು) ಮತ್ತು ಸಾಯುಜ್ಯ (ಭಗವಂತನಲ್ಲಿ ಐಕ್ಯವಾಗುವುದು) ಎಂದು ನಾಲ್ಕು ಬಗೆಯಾಗಿರುವುದು. ವೈಖಾನಸ ಗ್ರಂಥಗಳು ವಿಷ್ಣುವಿನ ಒಂದು ಅಂಶವು ಉಳಿದೆಲ್ಲವುಗಳನ್ನು ಒಳಗೊಂಡಿರುವಂತಿರುವ ಆಮೋದ (ವಿಷ್ಣು), ಪ್ರಮೋದ (ಮಹಾವಿಷ್ಣು), ಸಮ್ಮೋದ (ಸದಾವಿಷ್ಣು) ಮತ್ತು ವೈಕುಂಠ (ನಾರಾಯಣ ಅಥವಾ ವ್ಯಾಪಿನಾರಾಯಣ) ಎಂಬ ನಾಲ್ಕು ಸಾಮ್ರಾಜ್ಯಗಳನ್ನು ಕುರಿತು ಹೇಳುವುವು. ಮೇಲೆ ಹೇಳಿದ ನಾಲ್ಕು ಬಗೆಯ ಮುಕ್ತಿಗಳು ಅನುಕ್ರಮವಾಗಿ ಈ ನಾಲ್ಕು ಸಾಮ್ರಾಜ್ಯಗಳಿಗೆ ಸಂಬಂಧಿಸಿರುವುವು. ಕೊಟ್ಟಕೊನೆಯ ಸ್ಥಿತಿಯಲ್ಲಿ ಮುಕ್ತ ಚೇತನವು ಪರಂಜ್ಯೋತಿಯನ್ನು ಪ್ರವೇಶಿಸಿ ಚಿರಂತನವಾದ ಆನಂದವನ್ನು ಪಡೆಯುವುದು.

ಪಾಂಚರಾತ್ರಾಗಮದ ನಾಲ್ಕು ವ್ಯೂಹಗಳಿಗನುಗುಣವಾಗಿ ವೈಖಾನಸವೂ ಸಹ ಆದಿಮೂರ್ತಿಯೆಂದು ಕರೆಯಲ್ಪಡುವ ವಿಷ್ಣುವಿನ ನಾಲ್ಕು ಅಂಶಗಳನ್ನು ಶ್ರುತಪಡಿಸುವುದು. ಇವುಗಳೆಂದರೆ, ಋಜುತ್ವವೆಂಬ ಧರ್ಮಗುಣವನ್ನು ಪ್ರತಿನಿಧಿಸುವ ಪುರುಷ; ಜ್ಞಾನಗುಣವುಳ್ಳ ಸತ್ಯ; ಮಹಿಮಾನ್ವಿತ ಐಶ್ವರ್ಯ ಗುಣವುಳ್ಳ ಅಚ್ಯುತ ಹಾಗೂ ವೈರಾಗ್ಯಗುಣವುಳ್ಳ ಅನಿರುದ್ಧ. ಪ್ರಾಣಾಯಾಮ, ನಾಡಿಗಳು, ಕುಂಡಲಿನೀ, ಚಕ್ರಗಳು ಮೊದಲಾದ ಯೋಗದ ಕೆಲವು ಅಂಶಗಳನ್ನೂ ಈ ಆಗಮಗ್ರಂಥಗಳು ವಿಶದಪಡಿಸುತ್ತವೆ.

**ವೈಖಾನಸ ಸಮುದಾಯ**

ದೇವಸ್ಥಾನದ ಅರ್ಚಕರಾಗಿರುವುದಕ್ಕೇ ಜನ್ಮತಳೆದ ಪಂಗಡದ ಜನರಿವರು. ಅವರು ಅರ್ಚಕವೃತ್ತಿಯನ್ನು ಮಾತ್ರವೇ ಅವಲಂಬಿಸಿ ಜೀವಿಸಬೇಕು. ವೈಖಾನಸ ಕುಟುಂಬದವರಲ್ಲಿ ರೂಢಿಯಲ್ಲಿರುವ ಒಂದು ವಿಶಿಷ್ಟ ಕ್ರಿಯಾಕರ್ಮವೆಂದರೆ ವಿಷ್ಣುಬಲಿ ಅಥವಾ ಗರ್ಭಚಕ್ರ ಸಂಸ್ಕಾರ. ಇದನ್ನು ತಾಯಿಯ ಸೀಮಂತವಾದ ಮೇಲೆ ಗರ್ಭದ ಎಂಟನೆಯ ತಿಂಗಳ ಶುಕ್ಲಪಕ್ಷದಲ್ಲಿ ಮಾಡುವರು. ಇದು ಒಂದು ಹೋಮವನ್ನೂ, ಶಂಖ ಚಕ್ರ ಲಾಂಛನಗಳನ್ನು ಅಟ್ಟಿ ಒಂದು ಭಾಗವನ್ನು ಹೋಮದಲ್ಲಿ ಅಗ್ನಿಗೆ ಅರ್ಪಿಸಿದ ಪಾಯಸವನ್ನು ಗರ್ಭಿಣಿ ತಾಯಿಗೆ ಕೊಡುವುದನ್ನೂ ಒಳ

ಗೊಂಡಿದೆ. ಅವಳು ಅದನ್ನು ಸೇವಿಸುವಾಗ ಒಂದು ವಿಶೇಷ ಮಂತ್ರೋಚ್ಚಾರಣೆಯನ್ನು ಮಾಡುವರು. ಈ ಕರ್ಮ ನಡೆಯುವಾಗ ಸಾಕ್ಷಾತ್ ವಿಷ್ಣುವೇ ತನ್ನ ಕೈಯಲ್ಲಿ ಧರಿಸಿರುವ ಶಂಖ ಚಕ್ರಗಳ ಮುದ್ರೆಗಳನ್ನು ಮಗುವಿನ ತೋಳುಗಳ ಮೇಲೆ ಹಾಕುವನೆಂಬ ನಂಬಿಕೆಯಿದೆ. ಈ ಕರ್ಮಾನುಷ್ಠಾನದ ಫಲ ಪ್ರಾಪ್ತಿಯೆಂದರೆ, ವೈಖಾನಸನಾಗಿ ವಿಷ್ಣುಮುದ್ರೆಗಳಿಂದ ಪವಿತ್ರ ವಾಗಿ ಹುಟ್ಟುವ ಮಗುವಿಗೆ ಪಾಂಚರಾತ್ರರು ಮಾಡುವ ದೀಕ್ಷೆ ಮೊದಲಾದ ಕರ್ಮಗಳ ಅಗತ್ಯವಿರುವುದಿಲ್ಲ; ವಿಷ್ಣುವಿನ ಅರ್ಚಕನಾಗುವ ಹಕ್ಕು ಅದಕ್ಕೆ ಜನ್ಮಸಿದ್ಧವಾಗಿಯೇ ಲಭಿಸುವುದು. ವಿಧ್ಯುಕ್ತವಾಗಿ ಪೂಜೆಯನ್ನು ಕಲಿತುಕೊಂಡ ಮೇಲೆ ಅವನು ಮನೆಯಲ್ಲೂ ದೇವಸ್ಥಾನದಲ್ಲೂ ವಿಷ್ಣು ಪೂಜೆಯನ್ನು ಮಾಡಬಹುದು. ಸಾಮಾನ್ಯವಾಗಿ ಇವರು ತಮ್ಮ ಕರ್ತವ್ಯ ಎಂಬಂತೆ ಅರ್ಚಕವೃತ್ತಿಯನ್ನು ಕೈಕೊಳ್ಳುವರೇ ಹೊರತು ಜೀವನೋಪಾಯಕ್ಕಲ್ಲ (ಜೀವನೋಪಾಯಕ್ಕಾಗಿ ದೇವಸ್ಥಾನದಲ್ಲಿ ಅರ್ಚಕರಾಗುವ ವೈಖಾನಸರಿಗೆ ದೇವಲಕ ರೆಂದು ಹೆಸರು): ಇವರ ಜೀವನಾವಶ್ಯಕತೆಗಳನ್ನು ನೋಡಿ ಕೊಳ್ಳುವುದು ದೇವಸ್ಥಾನದ ಆಡಳಿತ ಮಂಡಳಿಯವರ ಕರ್ತವ್ಯ. ದೇವಸ್ಥಾನದಲ್ಲಿ ಪೂಜಿಸುವ ಅರ್ಚಕರ ಸ್ಥಾನಕ್ಕೆ ವೈಖಾನಸರು ಒಂದು ಔನ್ನತ್ಯವನ್ನು ತಂದುಕೊಟ್ಟಿರುವರು ಎನ್ನಬಹುದು. ಪ್ರತಿಮೆಯಲ್ಲಿ ಆವಾಹನೆಯಾದ ಮೇಲೆ ದಿವ್ಯತೆ ಬರು ವುದಾದರೆ, ವೈಖಾನಸರ ನಂಬಿಕೆಯಂತೆ ಅರ್ಚಕನಲ್ಲಿ ದಿವ್ಯತೆ ಶಾಶ್ವತವಾಗಿಯೇ ನೆಲೆಗೊಂಡಿರುವುದು. ಆತ್ಮಸೂಕ್ತವನ್ನು (ವೈಖಾನಸ ಸಂಹಿತಾ, ಮಂತ್ರಪ್ರಶ್ನ ೫. ೪೯) ಪಠಿಸುವ ಅರ್ಚಕನು ವಿಷ್ಣುವಿನ ವಿಶ್ವರೂಪದೊಂದಿಗೆ ಸಾಯುಜ್ಯವನ್ನು ಪಡೆಯುವನು.

### ದೇವಸ್ಥಾನದಲ್ಲಿ ಪೂಜೆಗೊಳ್ಳುವ ಪ್ರತಿಮೆಗಳು

ವೈಖಾನಸರ ಪೂಜೆಯ ಕ್ರಮ ಮುಖ್ಯವಾಗಿ ವಿಷ್ಣುವನ್ನು ಉದ್ದೇಶಿಸಿದ್ದು. ಇವರ ಕ್ರಮವನ್ನು ಅನುಸರಿಸುವ ದೇವ ಸ್ಥಾನಗಳಲ್ಲಿ ಸಾಮಾನ್ಯವಾಗಿ ನಾಲ್ಕೈದು ಪೂಜೆಯ ಪ್ರತಿಮೆ ಗಳಿರುತ್ತವೆ. ಧ್ರುವಬೇರ ಎನ್ನುವುದು ಶಾಶ್ವತವಾಗಿ ಸ್ಥಾಪಿಸಲಾದ ಕಲ್ಲಿನ ವಿಗ್ರಹ. ಅನಂತರದ್ದು ಕೌತುಕಬೇರ — ಇದು ಮೂಲ ವಿಗ್ರಹದ ತದ್ರೂಪ; ಆದರೆ ಗಾತ್ರದಲ್ಲಿ ಸಣ್ಣದು. ಇದಕ್ಕೆ ನಿತ್ಯ ಪೂಜೆ ಸಲ್ಲುವುದರಿಂದ ಅರ್ಚನಬೇರ ಎಂತಲೂ ಇದನ್ನು ಕರೆಯುವರು. ಅನಂತರದ್ದು ಸ್ನಪನಬೇರ—ಇದನ್ನು ಸಾಂದರ್ಭಿಕ ಅಥವಾ ನೈಮಿತ್ತಿಕ ಕರ್ಮಗಳಲ್ಲಿ ಉಪ ಯೋಗಿಸುವರು. ಕೊನೆಯದೇ ಉತ್ಸವಬೇರ (ಅಥವಾ ಔತ್ಸವ ಬೇರ)—ಇದನ್ನು ಪ್ರಾಪಂಚಿಕ ಆಶೋತ್ತರಗಳ ಸಾಫಲ್ಯಕ್ಕಾಗಿ ಪೂಜಿಸುವವರ ಕಾಮ್ಯಾರ್ಚನೆಗಾಗಿ ಬಳಸುವರು. ಕೌತುಕ ಬೇರವನ್ನು ಅರ್ಚನಪೀಠದಲ್ಲಿ ಸ್ಥಾಪಿಸುವರು; ಸ್ನಪನಬೇರ ವನ್ನು ಗರ್ಭಗುಡಿಯಿಂದ ಹೊರಗೆ ಸ್ನಪನಮಂಟಪವೆಂಬ ಇನ್ನೊಂದೆಡೆ ಇಡುವರು. ಉತ್ಸವಬೇರಕ್ಕೂ ಅದರದ್ದೇ ಆದ ವಿಶಿಷ್ಟ ಸ್ಥಳವಿರುವುದು.

ವಿಷ್ಣು ಮೂರು ಹೆಜ್ಜೆಯಿಟ್ಟು ನಡೆದಿರುವನು ಎಂಬುದು ಐತಿಹ್ಯ (ವಿಷ್ಣುಸೂಕ್ತದ ೩ನೆಯ ಶ್ಲೋಕ). ಧ್ರುವಬೇರವು ವಿಷ್ಣುವಿನ ಮೂಲ ನಿಲುವು ಎಂದಾದರೆ, ಇನ್ನಿತರ ಮೂರು ವಿಗ್ರಹಗಳು ಅವನ ಮೂರು ಹೆಜ್ಜೆಗಳನ್ನು ಪ್ರತಿನಿಧಿಸುವುವು: ಮೊದಲ ಹೆಜ್ಜೆ ಕೌತುಕಬೇರ; ಎರಡನೆಯದು ಸ್ನಪನಬೇರ ಮತ್ತು ಮೂರನೆಯದು ಉತ್ಸವಬೇರ; ಮೂಲವಿಗ್ರಹದ ಚೇತನವೇ ಈ ಮೂರರಲ್ಲೂ ಪ್ರವೇಶಿಸಿರುವುದು. ಕೆಲವೊಮ್ಮೆ ಈ ಮೂರು ಜಂಗಮವಿಗ್ರಹಗಳ ಜೊತೆಗೆ ಬಲಿಬೇರ ಎಂಬ ಇನ್ನೊಂದು ವಿಗ್ರಹವೂ ಸೇರುವುದು. ಜೊತೆಗಿರುವ ಅನುಚರ ದೇವತೆಗಳಿಗೆ ನಿತ್ಯದ ಆಹಾರ ನಿವೇದನೆಯನ್ನು ಪೂರೈಸಲು ಇದನ್ನು ಬಳಸುವರು. ಈ ಜಂಗಮವಿಗ್ರಹವನ್ನೇ ಎಲ್ಲ ಉದ್ದೇಶಗಳಿಗೂ ಬಳಸುವುದಾದರೆ, ಅದಕ್ಕೆ ಭೋಗಬೇರ ಎಂದು ಹೆಸರು. ಕೆಲವೊಮ್ಮೆ ಒಬ್ಬನೇ ದೇವರಿಗೆ ಐದು ವಿಗ್ರಹ ಗಳನ್ನು ಬಳಸುವ ಕ್ರಮವನ್ನು ಗಾರ್ಹಪತ್ಯ, ಆಹವನೀಯ, ದಕ್ಷಿಣಾಗ್ನಿ, ಆವಸಥ್ಯ ಮತ್ತು ಸಭ್ಯವೆಂಬ ವೈದಿಕ ಪಂಚಾಗ್ನಿ ಗಳನ್ನು ಸ್ಥಾಪಿಸಿ ಉಳಿಸಿಟ್ಟುಕೊಳ್ಳುವುದಕ್ಕೆ ಇದನ್ನು ಹೋಲಿಸು ವರು.

ಪಾಂಚರಾತ್ರ ಕ್ರಮದ ನಾಲ್ಕು ವ್ಯೂಹಗಳಂತೆಯೇ ವೈಖಾನಸದಲ್ಲಿ ಚತುರ್ಮೂರ್ತಿಗಳಿವೆ. ವಿಷ್ಣುವು ಆದಿ ಮೂರ್ತಿ. ಉಳಿದ ನಾಲ್ಕು ಮೂರ್ತಿಗಳೆಂದರೆ ಪುರುಷ, ಸತ್ಯ, ಅಚ್ಯುತ ಮತ್ತು ಅನಿರುದ್ಧ. ಇವೇ ದೇವಸ್ಥಾನದಲ್ಲಿರುವ ನಾಲ್ಕು ಪ್ರತಿಮೆಗಳು: ಕೌತುಕಬೇರವು ಪುರುಷನನ್ನು, ಉತ್ಸವ ಬೇರವು ಸತ್ಯವನ್ನು, ಸ್ನಪನಬೇರವು ಅಚ್ಯುತನನ್ನು ಮತ್ತು ಬಲಿಬೇರವು ಅನಿರುದ್ಧನನ್ನು ಪ್ರತಿನಿಧಿಸುತ್ತವೆ. ಆದರೆ ಪೂಜೆ ನಡೆಸುವಾಗ ಅನಿರುದ್ಧನನ್ನು ಸಾಮಾನ್ಯವಾಗಿ ಬಿಟ್ಟುಬಿಡುವರು.

ವೈಖಾನಸ ಕ್ರಮದ ಪೂಜೆಯಲ್ಲಿ, ವಿಷ್ಣುವಿನ ಈ ನಾಲ್ಕು ಅಂಶಗಳು ದೇವಸ್ಥಾನದಲ್ಲಿನ ವಿಗ್ರಹದ ಸುತ್ತಲೂ—ಪೂರ್ವಕ್ಕೆ ಪುರುಷ, ದಕ್ಷಿಣಕ್ಕೆ ಸತ್ಯ, ಪಶ್ಚಿಮಕ್ಕೆ ಅಚ್ಯುತ ಮತ್ತು ಉತ್ತರಕ್ಕೆ ಅನಿರುದ್ಧ—ಹೀಗೆ ನೆಲೆಗೊಂಡಿರುವುವು ಎಂದು ಪರಿಗಣಿಸು ವರು. ಆದರೆ ಮೂರ್ತಿಶಿಲ್ಪದ ಶಾಸ್ತ್ರೀಯ ಗ್ರಂಥಗಳು ಈ ವಿಗ್ರಹಗಳನ್ನು ಬೇರೆ ರೀತಿಗಳಲ್ಲಿ ವಿವರಿಸುವುವು.

**ಉಪಸಂಹಾರ**

ವೈಖಾನಸ ಆಗಮಗಳು ಮುಖ್ಯವಾಗಿ ಅರ್ಚಾ ಅಥವಾ ಮೂರ್ತಿಪೂಜೆಗೆ—ದೇವರುಗಳ, ಅವರುಗಳ ಪತ್ನಿಯರ ಮತ್ತು ಅನುಯಾಯಿ ದೇವತೆಗಳ ವಿಗ್ರಹಗಳಿಗೆ—ಪ್ರಾಧಾನ್ಯತೆ ಕೊಡುವುವಾದರೂ, ಅವುಗಳ ಮೂಲಭೂತ ದೃಷ್ಟಿಕೋನವು ಆದರ್ಶದ್ದೇ ಆಗಿದೆ. ದೇವರು ಸರ್ವಾಧಾರ (ಎಲ್ಲಕ್ಕೂ ಆಧಾರನು), ಸನಾತನ (ಪುರಾತನ ಮತ್ತು ಚಿರಂತನ), ಅಪ್ರಮೇಯ (ಅಳತೆಗೆ ನಿಲುಕದವನು), ಅಚಿಂತ್ಯ (ನಿರೂಪಿಸಲಾಗದಂಥವನು), ನಿರ್ಗುಣ (ಹೀಗೆಂದು ಹೇಳಲು ಬಾರದ ಗುಣಗಳುಳ್ಳವನು) ಮತ್ತು ನಿಷ್ಕಲಾ (ಭಾಗ ಮಾಡಲಾಗದಂಥವನು) ಎಂದು ಅವು ಪರಿಭಾವಿಸುತ್ತವೆ. ಹಾಲಿನಲ್ಲಿ ಬೆಣ್ಣೆ ಇರುವ ಹಾಗೆ, ಬೀಜಗಳಲ್ಲಿ ಎಣ್ಣೆ ಇರುವ ಹಾಗೆ, ಕಟ್ಟಿಗೆಯಲ್ಲಿ ಬೆಂಕಿ ಇರುವ ಹಾಗೆ, ಅವನು ಸರ್ವವ್ಯಾಪಿ ಎಂದು ನಿರೂಪಿಸುತ್ತವೆ.

ಅರಣಿಯಲ್ಲಿನ ಮರದ ತುಂಡುಗಳ ಘರ್ಷಣೆಯಿಂದ ಬೆಂಕಿಯು ಹುಟ್ಟಿ ಪ್ರಜ್ವಲಿಸುವಂತೆ, ಧ್ಯಾನಮಥನ ಅಥವಾ ನಿರಂತರ ಧ್ಯಾನ ಮಾಡುವ ಭಕ್ತನ ಹೃದಯದಲ್ಲಿ ವಿಷ್ಣು ಪ್ರತ್ಯಕ್ಷನಾಗುತ್ತಾನೆ. ಇದು ಭಕ್ತನ ಭಕ್ತಿಯಿಂದಾಗಿ, ಕಲ್ಪನೆಯಿಂದಾಗಿ ಆವಿರ್ಭವಿಸುವ ನಿರಪೇಕ್ಷ ಬ್ರಹ್ಮನ 'ಸಕಲಾ' ರೂಪ.

ಆದರೂ ಸಹ, ಶಾಸ್ತ್ರಗ್ರಂಥಗಳಲ್ಲಿ ನಿರೂಪಿಸಿರುವಂತೆಯೇ ಸರಿಯಾದ ಕ್ರಮದಲ್ಲಿ ತಯಾರಿಸಿದ ಪ್ರತಿಮೆಯನ್ನು ಪೂಜಿಸುವುದು ತೀರ ಮುಖ್ಯ. ಅದೊಂದೇ ಕೊನೆಗೆ ಮುಕ್ತಿಗೆ ಕೊಂಡೊಯ್ಯಬಲ್ಲುದು. ಇದು ವೈಖಾನಸ ಆಗಮಗಳ ತಾತ್ಪರ್ಯ.

✪

## ಪ್ರಹಸನ ಪ್ರಸಂಗ

ಛಾನ್ಸಲರ್ ಲಾಯ್ಡ್ ಜಾರ್ಜ್, ಭಾಷಣಕ್ಕೆಂದು ಸೌತ್ ವೇಲ್ಸ್‌ಗೆ ಹೋಗಿದ್ದರು. ಭಾಷಣವನ್ನು ಏರ್ಪಡಿಸಿದ್ದ ಸಂಘದ ಅಧ್ಯಕ್ಷರು ಲಾಯ್ಡ್ ಜಾರ್ಜ್ ಅವರನ್ನು ಉದ್ದೇಶಿಸಿ "ನಾನು ಲಾಯ್ಡ್ ಜಾರ್ಜ್‌ರ ವ್ಯಕ್ತಿತ್ವದ ಬಗ್ಗೆ ಸಾಕಷ್ಟು ಕೇಳಿದ್ದೇನೆ. ಆದರೆ, ಅವರ ದೇಹವನ್ನು ಗಮನಿಸಿದಾಗ, ಅವರೆಷ್ಟು ಕುಳ್ಳಾಗಿದ್ದಾರೆಂದು ತಿಳಿಯಿತು" ಎಂದು ಲಘುವಾಗಿ ಮಾತಾಡಿಬಿಟ್ಟರು. ಇದನ್ನು ಕೇಳಿದ ಲಾಯ್ಡ್ ಜಾರ್ಜ್‌ರಿಗೆ ಕಿಂಚಿತ್ತೂ ವ್ಯಥೆಯಾಗಲಿಲ್ಲ. ಅವರು ಎದ್ದು ನಿಂತು ಹೀಗೆ ಪ್ರತ್ಯುತ್ತರ ನೀಡಿದರು: "ಮಾನ್ಯರೆ ನಿಮ್ಮ ಸಂಘದ ಅಧ್ಯಕ್ಷರು ನನ್ನ ದೇಹದ ಅಳತೆಯ ಬಗ್ಗೆ ಮಾತಾಡಿದರು. ನಿಮ್ಮ ನಾಡಿನಲ್ಲಿ ಮನುಷ್ಯನ ಅಳತೆಯನ್ನು ಅವನ ಕುತ್ತಿಗೆಯಿಂದ ಕೆಳಗೆ ಅಳೆಯುವುದು ವಾಡಿಕೆ ಎನಿಸುತ್ತದೆ. ಆದರೆ, ನಮ್ಮ ನಾಡಾದ ನಾರ್ತ್ ವೇಲ್ಸಿನಲ್ಲಿ, ಮನುಷ್ಯನ ಅಳತೆಯನ್ನು ಅವನ ಭುಜದಿಂದ ಮೇಲಕ್ಕೆ ಅಳೆಯುತ್ತೇವೆ. ಅಳೆಯುವ ರೀತಿ ಬೇರೆ ಬೇರೆ. ಆದರೆ, ಸರಿಯಾದ ರೀತಿ ಯಾವುದೆಂದು ನೀವೇ ಪ್ರಶ್ನಿಸಿಕೊಳ್ಳಿ."

✸ ✸ ✸

**ಮಾರ್ಕ್ ಟ್ವೈನ್** ಒಂದು ಬಾರಿ ಭಾಷಣ ಮಾಡಲು ಬೇರೊಂದು ಪಟ್ಟಣಕ್ಕೆ ಪ್ರಯಾಣ ಬೆಳೆಸಬೇಕಾಯಿತು. ದಾರಿಯಲ್ಲಿ ಒಂದು ಚಿಕ್ಕ ಊರಿನಲ್ಲಿ ತಂಗಿದರು. ಅಲ್ಲಿನ ಕೇಶವಿನ್ಯಾಸದ ಅಂಗಡಿಗೆ (ಹೇರ್ ಕಟಿಂಗ್ ಸಲೂನ್) ಭೇಟಿಕೊಟ್ಟರು. ಕ್ಷೌರ ಮಾಡುವಾತ ಅವರೊಂದಿಗೆ ಮಾತನಾಡುತ್ತ ಹೀಗೆಂದನು: "ಮಾನ್ಯರೇ, ನೀವು ಈ ಊರಿಗೆ ಹೊಸಬರು ಎಂದು ಕಾಣಿಸುತ್ತೆ." ಅದಕ್ಕೆ ಉತ್ತರವಾಗಿ ಮಾರ್ಕ್ ಟ್ವೈನ್ ಅವರು, "ಹೌದು, ನೀವು ಹೇಳಿದ್ದು ಸರಿ", ಎಂದರು. ಕ್ಷೌರ ಮಾಡುವಾತ, "ಸದ್ಯ, ನೀವು ಸರಿಯಾದ ಟೈಂಗೆ ಬಂದಿದ್ದೀರಿ. ಏಕೆಂದರೆ, ಎಲ್ಲರೂ ತಮ್ಮ ತಮ್ಮ ಮುಖ ಕ್ಷೌರ ಮಾಡಿಸಿಕೊಂಡು ಮಾರ್ಕ್ ಟ್ವೈನ್ ಅವರು ನೀಡುವ ಭಾಷಣಕ್ಕೆ ಹೋದರು. ನನಗೆ ಈಗ ತಾನೇ ಬಿಡುವಾಯಿತು. ನೀವೂ ಸಹ ಮಾರ್ಕ್ ಟ್ವೈನ್ ಅವರ ಭಾಷಣಕ್ಕೆ ಹೋಗುತ್ತೀರೆಂದು ಭಾವಿಸಿದ್ದೇನೆ. ಆದರೆ ತಡವಾಯಿತೆಂದು ಹೇಳಬಯಸುತ್ತೇನೆ. ಅಷ್ಟೇ ಅಲ್ಲ, ಭಾಷಣ ಮಾಡುವ ಸಭಾಂಗಣದಲ್ಲಿರುವ ಎಲ್ಲ ಜಾಗಗಳೂ ಭರ್ತಿಯಾಗಿ ಹೋಗಿರಬಹುದು. ನೀವು ನಿಂತುಕೊಂಡೇ ಭಾಷಣ ಕೇಳಬೇಕಾಗಬಹುದು." ಇದಕ್ಕುತ್ತರವಾಗಿ ಮಾರ್ಕ್ ಟ್ವೈನ್ ನಿಟ್ಟುಸಿರು ಬಿಟ್ಟು ಹೀಗೆಂದರು: "ಅಯ್ಯೋ, ಮಾರ್ಕ್ ಟ್ವೈನ್ ಅವರು ಮಾತಾಡುವಾಗಲೆಲ್ಲಾ ನಾನು ನಿಂತುಕೊಂಡೇ ಇರಬೇಕಾಗಿದೆ."

✪

**(ಸಂಗ್ರಹ : ಪ್ರೊ. ಎಂ.ಎನ್.ಗೋಪಾಲನ್, ಮೈಸೂರು)**

**ಇದೇ ಸ್ವಾತಂತ್ರ್ಯ : ಬೇರೆಯವರ ಅಭಿಪ್ರಾಯಗಳಿಂದ ಮುಕ್ತವಾಗಿ ಕೇವಲ ನಿಮ್ಮ ಹೃದಯ ಬಯಸಿದಂತೆ ಭಾವಿಸುವುದು.** *–ಪೌಲ್ ಕೌಲಹೋ*